**-09-**

**ದಿನಾಂಕ:13-02-2024 ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲು:ಶ್ರೀ.ಎಸ್.ಟಿ.ಎಸ್. ವಕೀಲರಿಂದ ಪ್ರತಿವಾದಿ ಪರವಾಗಿ :-**

ನನ್ನ ಮಗಳು ಮುಂಬೈನಲ್ಲಿ 12 ತರಗತಿ ವರೆಗೆ ಮಹಿಳಾ ಸಂಘದ ಶಾಲೆಯಲ್ಲಿ ವ್ಯಾಸಂಗ ಮಾಡಿರುತ್ತಾರೆ. ನನ್ನ ಮಗಳು ದಿ.27.07.1986 ರಂದು ಶಿರೋಳಕರ ಆಸ್ಪತ್ರೆ ಮುಂಬೈನಲ್ಲಿ ಹುಟ್ಟಿರುತ್ತಾಳೆ. ನನ್ನ ಗಂಡ ಮನೋಹರ ತಂದೆ ಮಾರುತಿ ಲಾಡೆ ಬಗದೂರಿ ರವರು 33 ವರ್ಷಗಳಿಂದ ನಾಪತ್ತೆಯಾದ ಬಗ್ಗೆ ದೂರನ್ನು ನೀಡಿರುವುದಿಲ್ಲ. ಬಗದೂರಿ ಗ್ರಾಮದಲ್ಲಿ ಮನೋಹರ ಮಾರುತಿ ಲಾಡೆ ಎಂಬ ವ್ಯಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ ಮಾರುತಿ ತಂದೆಯವರ ಹೆಸರು ಪೀರಪ್ಪ ಲಾಡೆ ಎಂದು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಮನೋಹರ ತಾತನ ಹೆಸರು ನನಗೆ ಗೊತ್ತಿರುವುದಿಲ್ಲ. ಮನೋಹರ ಅಜ್ಜನ ಸಹೋದರ & ಸಹೋದರಿಯ ಹೆಂಡತಿಯರ ಬಗ್ಗೆ ಮಾಹಿತಿ ಇರುವುದಿಲ್ಲ. ಮಾರುತಿಗೆ ಸಹೋದರ & ಸಹೋದರಿಯರು ಇರಲಿಲ್ಲ. ಮಾರುತಿ ತಾಯಿಯ ಹೆಸರು ನನಗೆ ಗೊತ್ತಿರುವುದಿಲ್ಲ. ನನ್ನ ಮಗಳ ತಂದೆ ಹೆಸರು ಮನೋಹರ ಲಾಡೆ ಎಂದು ಇರುವ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಸಮಯ ಕೋರಿದ ಕಾರಣ ಪಾಟೀ ಸವಾಲು ಮುಂದೂಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**(ಓ.ಹೇ.ಕೇ.ಸ.ಇದೆ)**

**ದಿವಾಣಿ ನ್ಯಾಯಾಧೀಶರು
ಬಸವಕಲ್ಯಾಣ.**

**ಸಾಕ್ಷಿದಾರರ ಸಹಿ:-**